ಓ.ಎಸ್. ನಂ.104/2021
ಪಿ. ಡಬ್ಲ್ಯೂ -1

<u>ದಿನಾಂಕ: **29-07-2025**</u>

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು **2** ರಿಂದ **8** ನೇ ಪ್ರತಿವಾದಿ ಯರ ಪರ ವಕೀಲರಾದ ಶ್ರೀ.ಎಸ್.ಎನ್.ಬಿ. ರವರಿಂದ:

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳು ನನಗೆ ಗೊತ್ತಿರುತ್ತವೆ. . ಸಾಬಣ್ಣ ತೆಲಗರ ಈತನು ಜೀವಂತ ಇರುವುದಿಲ್ಲ. ಸಾಬಣ್ಣ ತೆಲಗರ ಈತನ ಹೆಂಡತಿಯ ಹೆಸರು ಭೀಮವ್ವ ಇರುತ್ತದೆ ಎಂದರೆ ಸರಿಯಲ್ಲ ಆದರೆ ಸಾಕ್ಷಿಯು ಮುಂದುವರೆದು ತಿಪ್ಪವ್ವ ಇರುತ್ತದೆ ಎಂದು ಹೇಳುತ್ತಾರೆ. ಭೀಮವ್ವಗೆ ಮೂರು ಜನ ಮಕ್ಕಳು ಇರುತ್ತಾರೆ ಅವರ ಹೆಸರು ಗಳು ದುರ್ಗವ್ವ, ಮಲ್ಲಪ್ಪ ಮತ್ತು ಕಲ್ಲಪ್ಪ ಇರುತ್ತವೆ ಎಂದರೆ ಸರಿ. ಈಗ ಕಲ್ಲಪ್ಪ ಜೀವಂತ ಇರುವುದಿಲ್ಲ. ಕಲ್ಲಪ್ಪನಿಗೆ ಯಾರು ಮಕ್ಕಳು ಇರುವುದಿಲ್ಲ ಎಂದರೆ ಸರಿ. ಅದೇ ರೀತಿ ದುರ್ಗವ್ವ ಸಹ ಜೀವಂತ ಇರುವುದಿಲ್ಲ. ಅದೇ ರೀತಿ ಮಲ್ಲಪ್ಪ ಸಹ ಜೀವಂತ ಇರುವುದಿಲ್ಲ. ಮಲ್ಲಪ್ಪನ ಹೆಂಡತಿಯ ಹೆಸರು ಶರಣಮ್ಮ ಇರುತ್ತದೆ ಎಂದರೆ ಸರಿ . ಮಲ್ಲಪ್ಪನಿಗೆ 5 ಜನ ಮಕ್ಕಳು ಇರುತ್ತಾರೆ ಎಂದರೆ ಸರಿ . ಅವರ ಹೆಸರುಗಳು ಮಲ್ಲಯ್ಯ , ಸಾಬಯ್ಯ , ಪಾರ್ವತಿ , ಮಹದೇವಮ್ಮ ಮತ್ತು ಹಣಮಂತ ಇರುತ್ತವೆ ಎಂದರೆ ಸರಿ. ಈಗ ಮಲ್ಲಯ್ಯ ಜೀವಂತ ಇರುವುದಿಲ್ಲ. ಮಲ್ಲಯ್ಯ ನ ಹೆಂಡತಿ ಹೆಸರು ಭೀಮಬಾಯಿ ಇರುತ್ತದೆ ಎಂದರೆ ಸರಿ. ಭೀಮಬಾಯಿಗೆ ಮೂರು ಜನ ಮಕ್ಕಳು ಇರುತ್ತದೆ ಎಂದರೆ ಸರಿ. ಅವರ ಹೆಸರುಗಳು ಸಾಬಯ್ಯ , ಶಿವರಾಜ ಮತ್ತು ದುರ್ಗಪ್ಪ ಇರುತ್ತದೆ ಎಂದರೆ ಸರಿ. ಈ ಮೇಲೆ ಹೇಳಿದ ಎಲ್ಲ ಜನರು ಸಾಬಯ್ಯನ ಕುಟುಂಬದ ಸದಸ್ಯರಾಗಿರುತ್ತಾರೆಂದರೆ ಸರಿ . ಸಾಬಯ್ಯ ರವರಿಗೆ ಒಬ್ಬಳೇ ಹೆಂಡತಿ ಭೀಮವ್ವ ಇರುತ್ತಾಳೆ ಎಂದರೆ ಸಾಕ್ಷಿಯು ತಿಪ್ಪವ್ವ ಇರುತ್ತಾಳೆ ಎನ್ನುತ್ತಾರೆ. ಸಾಬಯ್ಯನ ಹೆಂಡತಿ ತಿಪ್ಪವ್ವ ಇರುತ್ತಾಳೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದೇನೆಂದರೆ ಸರಿಯಲ್ಲ. ತಿಪ್ಪವ್ವನ 4 ಜನ ಮಕ್ಕಳಾದ ನಾಗಮ್ಮ, ತಿಮ್ಮಣ್ಣ , ಮಲ್ಲಪ್ಪ ಮತ್ತು ಈರಮ್ಮ ಇವರು ಸಾಬಯ್ಯನ ಕುಟುಂಬಕ್ಕೆ ಯಾವುದೇ ರೀತಿಯ ಸಂಬಂದವನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಮಲ್ಲಪ್ಪನ ಮಕ್ಕಳು ವಾದಿಯರೇ ಈ ದಾವೆಯನ್ನು ಸಲ್ಲಿಸಿರುತ್ತಾರೆಂದರೆ ಸರಿ. ಸಾಬಯ್ಯ ಮತ್ತು ತಿಪ್ಪವ್ವ ಕುಟುಂಬಕ್ಕೆ ಸಂಬಂಧಪಟ್ಟಿರುತೇವೆಂದು ತೋರಿಸಲು ನಾವು

ತಹಸಿಲ್ದಾರವರ ಕಡೆಯಿಂದ ಪಡೆದ ವಂಶಾವಳಿ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುತೇವೆ. ನಾವು ಸಾಬಯ್ಯನ ಕುಟುಂಬಕ್ಕೆ ಯಾವುದೇ ರೀತಿಯ ಸಂಬಂಧವನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಭೀಮವ್ವನ ಕುಟುಂಬ ಬೇರೆ ಹಾಗೂ ತಿಪ್ಪವ್ವನ ಕುಟುಂಬ ಬೇರೆ ಇರುತ್ತವೆ ಎಂದರೆ ಸರಿಯಲ್ಲ. ಆದ್ದರಿಂದ ದಾವಾದ ಆಸ್ತಿಗಳಲ್ಲಿ ನಮಗೆ ಹಕ್ಕು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಸಾಯಬಣ್ಣ ಮೃತ ಪಟ್ಟ ನಂತರ ಆತನ ಮಗ ಮಲ್ಲಪ್ಪನೇ ದಾವಾ ಆಸ್ತಿಗಳ ಮಾಲೀಕ ಮತ್ತು ಕಬ್ಜೆದಾರನಾಗಿರುತ್ತಾನೆ ಎಂದರೆ ಸರಿಯಲ್ಲ. ಮಲ್ಲಪ್ಪ ಮೃತ ಪಟ್ಟ ನಂತರ ದಾವಾದ ಆಸ್ತಿಗಳಿಗೆ 2 ರಿಂದ 8 ನೇ ಪ್ರತಿವಾದಿಯರೇ ಮಾಲೀಕರು ಮತ್ತು ಕಬ್ಜೆದಾರನಾಗಿರುತ್ತಾನೆ ಎಂದರೆ ಸರಿಯಲ್ಲ. ಮಲ್ಲಪ್ಪನ ವಾರಸುದಾರನಾದ 2 ರಿಂದ 8 ನೇ ಪ್ರತಿವಾದಿಯರು ದಾವಾದ ಆಸ್ತಿಗಳಿಗೆ ಹೆಸರುನ್ನು ದಾಖಲಿಸಿಕೊಂಡಿದ್ದರ ಬಗ್ಗೆ ನೀವೇನಾದರು ಪ್ರಶ್ನಿಸಿದಿರಾ ಎಂದರೆ ಸಾಕ್ಷಿಯು ನಮಗೆ ಗೊತಾದ ನಂತರ ಈ ದಾವೆಯನ್ನು ಸಲ್ಲಿಸಿದೆವು ಎಂದು ಹೇಳುತ್ತಾರೆ. ನಾವು ದಾವಾದ ಆಸ್ತಿಗಳಿಗೆ ಹಾಗೂ2 ರಿಂದ 8 ನೇ ಪ್ರತಿವಾದಿಯರ ಕುಟುಂಬಕ್ಕೆ ಸಂಬಂಧಪಡದೆ ಇರುವ ಕಾರಣ 2 ರಿಂದ 8 ನೇ ಪ್ರತಿವಾದಿಯರ ಹಕ್ಕು ಬದಲಾವಣೆಯನ್ನು ಪ್ರಶ್ನೆಸಿರುವುದಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮುಖಾಂತರ ಬೆರಳಚ್ಚುಗಾರಳಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಯಾದಗಿರಿ